

ಹುಬ್ಬಳ್ಳಿಯಿಂದ ನೈರುತ್ಯಕ್ಕೆ 52 ನಂಬರಿನ ರಾಷ್ಟ್ರೀಯ ಹೆದ್ದಾರಿಯಲ್ಲಿ ಕಲಘಟಗಿಯೆಡೆಗೆ ಸಾಗಿದರೆ, ಇಕ್ಕೆಡೆಯಲ್ಲಿ ಕಾಣುವುದು ಬಯಲುಸೀಮೆಯ ಸಮೃದ್ಧ ಹೊಲ. ಮುಂದೆಸಾಗಿ ಯಲ್ಲಾಪುರ ತಾಲ್ಲುಕು ಪ್ರವೇಶಿಸಿದಂತೆಲ್ಲ ಬೀಟೆ, ನಂದಿ, ಮತ್ತಿ, ತಾರೆಗಳಂಥ ಬೃಹತ್ ಮರಗಳ ಕಾಡು ಎದುರಾಗುತ್ತದೆ. ನೈಸರ್ಗಿಕವಾಗಿ ಬೆಳೆದ ಭಾರಿ ತೇಗದ ಮರಗಳು ಹಾಗೂ ತೇಗದ ನೆಡುತೋಪುಗಳ ನಡುವೆಯೇ ಹೆದ್ದಾರಿ ಸಾಗುತ್ತದೆ. ಹೆಜ್ಜೇನು ತುಂಬಿದ ಗಗನಚುಂಬಿ ಮಾವು, ಮದ್ದಾಲೆ ಮರಗಳೂ ಕಣ್ಣುಸೆಳೆಯುತ್ತವೆ. ಯಲ್ಲಾಪುರ ದಾಟಿ ಇಡಗುಂದಿ ಮೂಲಕ ಅರಬೈಲುಘಟ್ಟವಿಳಿದು ಅಂಕೋಲಾ ಸಮೀಪಿಸುವವರೆಗೂ ಈ ರಮ್ಯಕಾಡಿನ ಸಾಂಗತ್ಯದಲ್ಲೇ ಪಯಣ ಸಾಗುತ್ತದೆ. ಪಯಣದುದ್ದಕ್ಕೂ ಎಡಗಡೆ ಅನತಿ ದೂರದಲ್ಲೇ ಪ್ರಶಾಂತವಾಗಿ ಹರಿಯುತ್ತಾಳೆ ಬೇಡ್ತಿನದಿ. ಧಾರವಾಡ–ಹುಬ್ಬಳ್ಳಿಯ ದಿಕ್ಕಿನಿಂದ ಬಸಿದುಬರುವ ನೀರನ್ನು, ಅದರ ಕೊಳಚೆಯೊಂದಿಗೇ ಸಾಗಿಸುವ ಕರ್ತವ್ಯ ಆಕೆಯದ್ದು. ಯಲ್ಲಾಪುರ ಪಟ್ಟಣ ದಾಟಿ ಎಡಕ್ಕೆ ತಿರುಗಿ ಸ್ವಲ್ಪದೂರದ ಮಾಗೋಡಿಗೆ ತೆರಳಿದರೆ, ಕಾಡಿನ ನಡುವೆ ಆಕೆ ಧುಮುಕಿ ಸೃಷ್ಟಿಸಿದ ಭವ್ಯ ಜಲಪಾತದ ದೃಶ್ಯಕಾವ್ಯವನ್ನೂ ಕಾಣಬಹುದು. ಇಕ್ಕೆಲಗಳಲ್ಲಿರುವ ದಟ್ಟ ಕಾಡಿನ ನಡುವೆಯೇ ಸಾಗಿ, ರಾಮನಗುಳಿ, ಸುಂಕನಾಳ ಮೂಲಕ ಅಂಕೋಲಾ ಪಟ್ಟಣದ ಹೊರವಲಯದಲ್ಲಿ ಆಕೆ ಸಮುದ್ರ ಸೇರುತ್ತಾಳೆ. ಇಲ್ಲಿ ವಿಸ್ತಾರವಾಗಿ ಹರಿಯುವ ಬೇಡ್ತಿಗೆ ಗಂಗಾವಳಿಯೆಂಬ ಹೆಸರು. ಭತ್ತ, ತೆಂಗು, ಮಾವು, ತರಕಾರಿ ಬೆಳೆಯುವ ಅಂಕೋಲಾದ ನಾಡವರು, ಹಾಲಕ್ಕಿ, ಹಾಗೂ ಮೀನುಗಾರ ಸಮುದಾಯಗಳಿಗಂತೂ ಅವಳು ಗಂಗಾಮಾತೆಯೇ ಸರಿ. ಹುಬ್ಬಳ್ಳಿಯಿಂದ ಅಂಕೋಲಾದವರೆಗಿನ ಹೆದ್ದಾರಿಯಲ್ಲಿನ ಈ ಕಿರುಅವಧಿಯ ಪ್ರಯಾಣವೇ, ಪಶ್ಚಿಮಘಟ್ಟದ ಭವ್ಯತೆ ಹಾಗೂ ಅನನ್ಯತೆಯನ್ನು ಮನದಾಳಕ್ಕಿಳಿಸಬಲ್ಲದು.

ಈ ಹೆದ್ದಾರಿಯಲ್ಲಿ ಸದಾ ಸಾಗುವ ಉದ್ಯಮಿಗಳಿಗೆ ಪಕ್ಕದಲ್ಲೇ ಒಂದು ರೈಲುಮಾರ್ಗವೂ ಇದ್ದರೆ ಚೆನ್ನಾಗಿತ್ತೆಂದು ಅನ್ನಿಸುತ್ತಿರಬೇಕು. ಹಾಗೆಂದೇ ಹುಬ್ಬಳ್ಳಿ–ಅಂಕೋಲಾ ರೈಲುಮಾರ್ಗದ ಪ್ರಸ್ತಾವ ಸುಮಾರು ಮೂರು ದಶಕಗಳಿಂದಲೇ ಇದೆ. ಈ ಒತ್ತಾಸೆಯಿಂದಾಗಿಯೇ, 727 ಹೆಕ್ಟೇರ್ ದಟ್ಟ ಅರಣ್ಯವೂ ಸೇರಿದಂತೆ 1,134 ಹೆಕ್ಟೇರ್ ಭೂಮಿ ಬೇಡುವ ಸುಮಾರು 167 ಕಿ.ಮೀ. ದೂರದ ಈ ಯೋಜನೆಗೆ 1996ರಲ್ಲಿ ರೈಲ್ವೆ ಮಂಡಳಿಯು ಮಂಜೂರಾತಿ ನೀಡಿದ್ದು. ಅರಣ್ಯ ಮತ್ತು ಪರಿಸರ ಮಂತ್ರಾಲಯದ ಒಪ್ಪಿಗೆಯಿರದೆ ಹಾಗೂ ಪ್ರಜ್ಞಾವಂತ ವಲಯದ ವಿರೋಧದ ನಡುವೆಯೇ, ರೈಲ್ವೆ ಇಲಾಖೆಯು 2000ರಲ್ಲಿ ಹುಬ್ಬಳ್ಳಿ ದಿಕ್ಕಿನಿಂದ ಕಾಮಗಾರಿಯನ್ನೂ ಆರಂಭಿಸಿಬಿಟ್ಟಿತು. 'ರಾಜ್ಯ ವನ್ಯಜೀವಿ ಮಂಡಳಿ'ಯು ಕಳೆದ ಮಾರ್ಚ್ 20ರಂದು ಈ ಯೋಜನೆಗೆ ಹಸಿರು ನಿಶಾನೆ ತೋರಿದ ಹಿನ್ನೆಲೆಯಲ್ಲಿ, ಇದೀಗ ಮತ್ತೊಮ್ಮೆ ವಿವಾದ ಭುಗಿಲೆದ್ದಿದೆ.

ಈ ಪ್ರದೇಶದ ಕಾಡಿನ ದಾರಿಯಿರಲಿ, ಹೆದ್ದಾರಿಯಲ್ಲೊಮ್ಮೆ ಸಾಗಿದರೂ ಪ್ರಶ್ನೆಯೊಂದು ಎದುರಾಗಬಲ್ಲದು. ನಿಜಕ್ಕೂ ರೈಲುಮಾರ್ಗದ ಅಗತ್ಯವಿದೆಯೇ? ಅದಕ್ಕೆ ರೈಲ್ವೇ ಇಲಾಖೆಯು ಬಳ್ಳಾರಿ–ಹೊಸಪೇಟೆ ಪ್ರದೇಶದಿಂದ ಕಬ್ಬಿಣದ ಅದಿರನ್ನು ಬೇಲೇಕೇರಿ, ಕಾರವಾರದ ಬಂದರುಗಳಿಗೆ ಸಾಗಿಸಲು ಇದು ಅಗತ್ಯ ಎಂದು ವಾದಿಸುತ್ತದೆ. ಆದರೆ, ಈಗಾಗಲೇ ಹುಬ್ಬಳ್ಳಿ–ಲೋಂಡಾ–ಮಡಗಾಂವ್ ರೈಲುಮಾರ್ಗವಿದೆಯಲ್ಲವೇ? ತಿನೇಘಾಟಿನ ಸಮೃದ್ಧ ಅರಣ್ಯದ ಮೂಲಕ ಸಾಗುವ ಇದನ್ನು ಜೋಡಿಮಾರ್ಗವಾಗಿ ಪರಿವರ್ತಿಸುವ

**ದೇಶದಲ್ಲೇ ಬಹು ಅಮೂಲ್ಯ ವನ್ಯಜೀವಿ ಆವಾಸಗಳಲ್ಲಿ ಒಂದಾದ, ಅಪಾರ ವನ್ಯಜೀವಿಗಳು ಹಾಗೂ ಜೀವವೈವಿಧ್ಯವಿರುವ ಪ್ರದೇಶವನ್ನು ಮೆಟ್ಟಿ ರೈಲುಮಾರ್ಗ ಸಾಗಿದರೆ, ಇಲ್ಲಿನ ಪರಿಸರ ಹಾಗೂ ರೈತರ ಬದುಕು ಏನಾದೀತು?**